**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್**

# ಸಿ.ಸಿ.ನಂ.7498/2022

| | |
|---|---|
| ಸಾಕ್ಷಿದಾರನ ಹೆಸರು | :- ಗೋಪಾಲ |
| ತಂದೆಯ ಹೆಸರು | :- ರಾಮಣ್ಣ |
| ವಯಸ್ಸು | :- 44 ವರ್ಷ |
| ಉದ್ಯೋಗ | :- ವ್ಯವಸಾಯ |
| ವಾಸ | :- ಹುಲಿವಾಹನ ಗ್ರಾಮ, ತುಮಕೂರು ತಾಲ್ಲೂಕು. |

**ಸಾಕ್ಷಿಗೆ ದಿನಾಂಕಃ 27.03.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ಈ ಪ್ರಕರಣದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಯಾವುದೇ ದೂರನ್ನು ಪೋಲಿಸಿನವರಿಗೆ ನೀಡಿರುವುದಿಲ್ಲ. ಮೃತ ಮಂಜುನಾಥ್ ನಮ್ಮ ಊರಿನವರಾಗಿದ್ದರು. ಸಾಕ್ಷಿಗೆ ದೂರನ್ನು ತೋರಿಸಿದ್ದು, ಅದರಲ್ಲಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ ಕಾರಣ ಅದನ್ನು **ನಿ.ಪಿ.1** ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.2** ಎಂದು, ಅದರಲ್ಲಿನ ಸಹಿಯನ್ನು **ನಿ.ಪಿ.2(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.3** ಎಂದು, ಅದರಲ್ಲಿನ ಸಹಿಯನ್ನು **ನಿ.ಪಿ.3(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ವಾಹನ ಅಮಾನತ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.4** ಎಂದು, ಅದರಲ್ಲಿನ ಸಹಿಯನ್ನು **ನಿ.ಪಿ.4(ಎ)** ಎಂದು ಗುರುತಿಸಲಾಯಿತು. ನಿಪಿ.1 ರಿಂದ 4 ರ ದಾಖಲೆಗಳಿಗೆ ಸುಮಾರು 4-5 ವರ್ಷಗಳ ಹಿಂದೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಿಪಿ.1 ರಿಂದ 4 ರಲ್ಲಿ ಬರೆದಿರುವ ಮಾಹಿತಿಗಳು ನನಗೆ ಗೊತ್ತಿಲ್ಲ. ನಿಪಿ.1 ರಿಂದ 4 ರಲ್ಲಿ ಪೋಲಿಸರು ಏನು ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ.

ನಿಪಿ.1 ರಿಂದ 4 ರಲ್ಲಿ ಬರೆದಿರುವ ವಿಚಾರಗಳು ನನಗೆ ತಿಳಿದಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ವಾಟೀ ಸವಾಲಿಗಾಗಿ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಗಿದೆ.)**

**ವಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದ.**

ದಿನಾಂಕ 08.06.2022 ರಂದು ರಾತ್ರಿ ಸುಮಾರು 8-35 ರ ಸಮಯದಲ್ಲಿ ಕುಣಿಗಲ್ ನ ಯಡಿಯೂರು ರಸ್ತೆಯಲ್ಲಿ ಮೃತ ಮಂಜುನಾಥ್ ರವರು ತಮ್ಮ ಕೆಎ06-ಹೆಚ್.ಡಿ-6394ರ ಎನ್.ಹೆಚ್-75 ರಸ್ತೆಯಲ್ಲಿ ಬೈಕ್ ಅನ್ನು ಚಾಲನೆ ಮಾಡಿಕೊಂಡು ಹೋಗುತ್ತಿರಬೇಕಾರದೆ ಅದೇ ಸಮಯಕ್ಕೆ ಆರೋಪಿಯು ಕೆಎ.06-ಎಎ-8749ಲಾರಿಯನ್ನು ಯಡಿಯೂರು ಕಡೆಯಿಂದ ಕುಣಿಗಲ್ ಕಡೆಗೆ ಅತಿವೇಗ-ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಮುಂದೆ ಹೋಗುತ್ತಿದ್ದ ಯಾವುದೋ ವಾಹನವನ್ನು ಓವರ್ ಟೆಕ್ ಮಾಡಲು ಹೋಗಿ ತನ್ನ ವಾಹನವನ್ನು ಬಲಭಾಗಕ್ಕೆ ಬಂದು ಎಡರಸ್ತೆಯಲ್ಲಿ ಹೋಗುತ್ತಿದ್ದ ಬೈಕ್‌ಗೆ ಡಿಕ್ಕಿಯಾಗಿ ಅಪಘಾತ ಮಾಡಿದ್ದು, ಸದರಿ ಅಪಘಾತದಿಂದ ಮಂಜುನಾಥ್ ರವರಿಗೆ ತಲೆಗೆ ಕೈ ಕಾಲುಗಳಿಗೆ ತೀವ್ರ ಪೆಟ್ಟಾಗಿ ಸ್ಥಳದಲ್ಲಿಯೇ ಮೃತ ಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾವು 100 ಮೀಟರ್ ಅಂತರದಲ್ಲಿ ಮಂಜುನಾಥ್ ನ ಹಿಂಬದಿ ಬರುತ್ತಿದ್ದೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ದಿನಾಂಕಃ09.06.2022 ರಂದು ನಿಪಿ.1 ರಂತೆ ದೂರು ನೀಡಿದ್ದೆ ಎಂದರೆ ಸರಿಯಲ್ಲ.

ನಂತರ ಅದೇ ದಿನ ಬೆಳಿಗ್ಗೆ 10.00 ರಿಂದ 11.00 ರವರೆಗೆ ಪೋಲಿಸರು ಘಟನಾ ಸ್ಥಳದ ಪಂಚನಾಮೆ ಮಾಡಿ, ಸ್ಥಳದಲ್ಲೇ ಕಚ್ಚಾ ನಕಾಶೆಯನ್ನು ತಯಾರಿಸಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ.2 ಮತ್ತು 4 ರವರು ಸಹ ಇದ್ದು, ನಮ್ಮ

ಸಮಕ್ಷಮ ಪಂಚನಾಮೆ ಮಾಡಿ ನಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಪಂಚನಾಮೆ ಮಾಡಿದ್ದರೂ ಸಹ ಆರೋಪಿಗೆ ಅನೂಕೂಲ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಂತರ ಅದೇ ದಿನ ಬೆಳಿಗ್ಗೆ 11.30 ರಿಂದ 12.00 ರವರೆಗೆ ಅಪಘಾತಕ್ಕೀಡಾದ ಮತ್ತು ಅಪಘಾತಪಡಿಸಿದ ವಾಹನಗಳನ್ನು ಅಮಾನತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.ಆ ಸಮಯದಲ್ಲಿ ಚಾಸಾ.2 ಮತ್ತು 4 ರವರು ಸಹ ಇದ್ದು, ನಮ್ಮ ಸಮಕ್ಷಮ ಪಂಚನಾಮೆ ಮಾಡಿ ನಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಪಂಚನಾಮೆ ಮಾಡಿದ್ದರೂ ಸಹ ಆರೋಪಿಗೆ ಅನೂಕೂಲ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಎಲ್ಲ ವಿಚಾರಗಳು ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ವಾಟೀ ಸವಾಲು ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ಕುಣಿಗಲ್.